ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಸಹಕಾರ
ಜಯಭಾರತ ಫೌಂಡೇಶನ್, ಬೆಳಗಾವಿ
ಸಹಯೋಗ
ಕೆಎಲ್ಇ ಸೊಸೈಟಿ ಬೆಳಗಾವಿ
ಸಹಕಾರ
ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೆಳಗಾವಿ
ಸಹಕಾರ
ಅರಣ್ಯ ಇಲಾಖೆ ಬೆಳಗಾವಿ

ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮತ್ತು ಕಾಳಜಿ ಬೆಳೆಸುವ ಉದ್ದೇಶದಿಂದ ಜೂ.6ರಂದು ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಆಯೋಜಿಸಲಾಗಿದೆ. 12ರಿಂದ 18 ವರ್ಷದೊಳಗಿನ ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು.

3 ವಿಭಾಗದಲ್ಲಿ ಸ್ಪರ್ಧೆ
- ವಿಭಾಗ-1: 5 ರಿಂದ 7ನೇ ತರಗತಿ ವಿದ್ಯಾರ್ಥಿಗಳು
- ವಿಭಾಗ-2: 8 ರಿಂದ 10ನೇ ತರಗತಿ ವಿದ್ಯಾರ್ಥಿಗಳು
- ವಿಭಾಗ-3: ಪಿಯುಸಿ ವಿದ್ಯಾರ್ಥಿಗಳು ಭಾಗವಹಿಸಬಹುದು.

ಚಿತ್ರ ಬಿಡಿಸಲು ಈ ವರ್ಷದ ಥೀಮ್
Inspired by Nature. For Climate. For Our Future
ಪ್ರಕೃತಿಯಿಂದ ಸ್ಫೂರ್ತಿ ಪಡೆಯೋಣ; ಹವಾಮಾನ ಸಂರಕ್ಷಣೆಗಾಗಿ; ನಮ್ಮೆಲ್ಲರ ಭವಿಷ್ಯಕ್ಕಾಗಿ

ಬಹುಮಾನ ಏನು?
ಮೂರು ವಿಭಾಗದ ವಿಜೇತರಿಗೆ ನಗದು ಬಹುಮಾನ
- ಪ್ರಥಮ - 3000 ನಗದು
- ದ್ವಿತೀಯ - 2000 ನಗದು
- ತೃತೀಯ - 1000 ನಗದು
- ಭಾಗವಹಿಸಿದ ಎಲ್ಲರಿಗೂ - ಪ್ರಶಂಸಾ ಪತ್ರ

ಸೂಚನೆಗಳು
- ಡ್ರಾಯಿಂಗ್ ಶೀಟ್‌ಗಳನ್ನು ನಾವೇ ಕೊಡುತ್ತೇವೆ. ಪ್ಯಾಡು, ಪೆನ್ಸಿಲ್, ಸ್ಕೆಚ್ ಪೆನ್, ಸ್ಕೇಲು ಸೇರಿ ಇತರ ಬರವಣಿಗೆ ಸಾಮಗ್ರಿಗಳನ್ನು ಮಕ್ಕಳೇ ತರಬೇಕು.
- ಕೊಟ್ಟಿರುವ ಸ್ಪರ್ಧಾ ವಿಷಯ ಬಿಟ್ಟು ಬೇರೆ ಚಿತ್ರ ಬರೆಯಬಾರದು.
- ಚಿತ್ರವನ್ನು ಪೂರ್ಣಪ್ರಮಾಣದಲ್ಲಿ ಬಿಡಿಸಿರಬೇಕು.
- ಇಂಟರ್ನೆಟ್ ಪ್ರೇರಿತ ಚಿತ್ರಗಳಿಗೆ ಅವಕಾಶವಿಲ್ಲ. ಸ್ವಂತಿಕೆ ಇರಲಿ

ವಿಸೂ: ತೀರ್ಪುಗಾರರ ನಿರ್ಣಯವೇ ಅಂತಿಮ

ಜೂನ್ 6 ಚಿತ್ರಕಲಾ ಸ್ಪರ್ಧೆ

ಗುರುತಿನ ಚೀಟಿ, ಫೋಟೋ ಕಡ್ಡಾಯ
ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲ ಮಕ್ಕಳು ಓದುತ್ತಿರುವ ಶಾಲೆಯ ಐಡಿ ಕಾರ್ಡ್ ಅಥವಾ ಅಧಿಕೃತ ಗುರುತಿನ ಚೀಟಿ ಹಾಗೂ ಎರಡು ಪಾಸ್‌ಪೋರ್ಟ್ ಫೋಟೋ ಕಡ್ಡಾಯವಾಗಿ ತರಬೇಕು.

ಸ್ಪರ್ಧೆ ಎಲ್ಲಿ?
ಕೆಎಲ್ಇ ಲಿಂಗರಾಜ ಕಾಲೇಜ್ ಆವರಣ, ಲಿಂಗರಾಜ ರಸ್ತೆ, ಬೆಳಗಾವಿ

ನೋಂದಣಿ
ಮಧ್ಯಾಹ್ನ 1.00 ರಿಂದ
ಸ್ಪರ್ಧೆಯ ಸಮಯ
ಮಧ್ಯಾಹ್ನ 2.30 ರಿಂದ

ಜೂ.6ರಂದು ಸ್ಥಳದಲ್ಲೂ ಹೆಸರು ನೋಂದಣಿಗೆ ಅವಕಾಶ ಇದೆ

ನೋಂದಣಿ ಹಾಗೂ ಮಾಹಿತಿಗೆ ಸಂಪರ್ಕಿಸಿ
8884432467, 9741589405, 8884432338

ಆದಿತ್ಯರಾಜ್ ಮುಖ್ಯ ಕಚೇರಿ ಸೀಜ್

ದಾಖಲೆಗಳ ಪರಿಶೀಲನೆ ಪೂರ್ಣ | ಸರ್ಕಾರಕ್ಕೆ ವರದಿ ರವಾನೆ

■ ವಿಜಯವಾಣಿ ಸುದ್ದಿಜಾಲ ಬೆಳಗಾವಿ

ಹಣಕಾಸು ಅವ್ಯವಹಾರ ಸಂಬಂಧಿಸಿದ ಆರೋಪ ಹಿನ್ನೆಲೆಯಲ್ಲಿ ಇಲ್ಲಿನ ಭಾಗ್ಯನಗರದ ಆದಿತ್ಯರಾಜ್ ಕ್ಯಾಪಿಟಲ್ ಪ್ರೈ. ಲಿಮಿಟೆಡ್ ಮುಖ್ಯ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ಶ್ರವಣಕುಮಾರ ನಾಯಕ ನೇತೃತ್ವದ ಅಧಿಕಾರಿಗಳ ತಂಡ, ಗುರುವಾರ ಬೆಳಗ್ಗೆಯಿಂದ ಶುಕ್ರವಾರ ಸಂಜೆಯವರೆಗೂ ದಾಖಲೆಗಳನ್ನು ಪರಿಶೀಲಿಸಿ ಕಚೇರಿ ಸೀಜ್ ಮಾಡಿದ್ದಾರೆ.

ಜಿಲ್ಲಾಧಿಕಾರಿ ನಿರ್ದೇಶನದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿದ್ದೇವೆ. ಮೇಲ್ನೋಟಕ್ಕೆ ಆರ್‌ಬಿಐ ಮತ್ತು ಸೆಬಿ ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ. ತಪಾಸಣೆ ವೇಳೆ ಸುಮಾರು 6,500ರಷ್ಟು ಹೂಡಿಕೆಗಳು ಪತ್ತೆಯಾಗಿವೆ. ಆದರೆ, ಎಷ್ಟು ಹೂಡಿಕೆದಾರರಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಸಮಗ್ರ ವರದಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸುತ್ತೇವೆ. ಅವರು ಅದನ್ನು ಸರ್ಕಾರಕ್ಕೆ ರವಾನಿಸಲಿದ್ದಾರೆ ಎಂದು ಎಸಿ ಶ್ರವಣಕುಮಾರ ನಾಯಕ ಮಾಧ್ಯಮಗಳಿಗೆ ತಿಳಿಸಿದರು.

ಶಿವಂ ಅಸೋಸಿಯೇಟ್ಸ್ ರೀತಿಯಲ್ಲೇ ಇಲ್ಲೂ ಜನ ಹೂಡಿಕೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಎರಡು ದಿನ ಪರಿಶೀಲನೆ ನಡೆಸಿದರೂ ಮಹಾರಾಷ್ಟ್ರ ಮೂಲದ ಕಂಪನಿ ಮಾಲೀಕ ಆಗಮಿಸಿಲ್ಲ. ಭಾಗ್ಯ ನಗರದ ಮುಖ್ಯ ಕಚೇರಿಯಲ್ಲಿಒಟ್ಟು72ಸಿಬ್ಬಂದಿಇದ್ದಾರೆ.ಕರ್ನಾಟಕ,ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯದಲ್ಲಿ ಒಟ್ಟು 9 ಶಾಖೆಗಳಿವೆ ಎಂಬ ಮಾಹಿತಿ ಲಭಿಸಿದೆ.

ಕಂದಾಯ ಇಲಾಖೆ, ಸಹಕಾರ ಇಲಾಖೆ ಮತ್ತು ಸೈಬರ್ ಕ್ರೈಮ್ ಪೊಲೀಸರು ತಪಾಸಣೆಗೆ ಸಹಕಾರ ನೀಡಿದ್ದರು. ಬಹುತೇಕ ಹಣ ವರ್ಗಾವಣೆ ಆನ್‌ಲೈನ್ ಮೂಲಕ ನಡೆದಿದ್ದು, ಸಂಬಂಧಿತ ವೆಬ್‌ಸೈಟ್, ಬ್ಯಾಂಕ್ ಖಾತೆ ಹಾಗೂ ಹೂಡಿಕೆದಾರರ ಮಾಹಿತಿಯನ್ನು ಅಧಿಕಾರಿಗಳ ತಂಡ ಕಲೆ ಹಾಕಿದ್ದು, ಇದನ್ನು ಆಧರಿಸಿ ಸಹಕಾರ ಸಂಘಗಳ ನಿಬಂಧಕರು ಬರ್ಡ್ಸ್ ಮತ್ತು ಕೆಪಿಐಡಿ ಕಾಯ್ದೆಯಡಿ ದೂರು ದಾಖಲಿಸುವ ತಯಾರಿಯಲ್ಲಿದ್ದಾರೆ.

ಪ್ರತ್ಯೇಕ ಪ್ರಕರಣದಲ್ಲಿ ಕಳ್ಳರಿಬ್ಬರ ಬಂಧನ

■ ವಿಜಯವಾಣಿ ಸುದ್ದಿಜಾಲ ಬೆಳಗಾವಿ

» 33.63 ಲಕ್ಷ ರೂ. ಮೌಲ್ಯದ ಚಿನ್ನ, 4 ಕೆಜಿ ಬೆಳ್ಳಿ ವಶ

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಕಳ್ಳರನ್ನು ಬಂಧಿಸಿರುವ ನಗರ ಪೊಲೀಸ್ ಕಮಿಷ್ನರೇಟ್ ವ್ಯಾಪ್ತಿಯ ಎರಡು ಠಾಣೆ ಪೊಲೀಸರು, ಒಟ್ಟು 33,63,370ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ.

ಮಂಡೋಳಿಯ ನೀಲೇಶ ಭರಮಾ ಸುತಾರ (41) ಬಂಧಿಸಿರುವ ಬೆಳಗಾವಿ ಗ್ರಾಮೀಣ ಠಾಣೆ ಪೊಲೀಸರು ವಿವಿಧ ಪ್ರಕರಣಗಳಲ್ಲಿನ ಒಟ್ಟು 7 ಲಕ್ಷ ರೂ. ಮೌಲ್ಯದ 45 ಗ್ರಾಂ ಚಿನ್ನ ಹಾಗೂ 10.90 ಲಕ್ಷ ರೂ. ಮೌಲ್ಯದ 4 ಕೆಜಿ 178 ಗ್ರಾಂ. ಬೆಳ್ಳಿ ಆಭರಣ ಮತ್ತು ಸಾಮಗ್ರಿ ವಶಪಡಿಸಿಕೊಂಡಿದ್ದಾರೆ.

ಮಂಡೋಳಿ ರಸ್ತೆಯ ರೋಹನ್ ಜಾಧವ ಮನೆಯಲ್ಲಿ ಕಳ್ಳತನವಾದ ಬಗ್ಗೆ ಜ.1ರಂದು ದೂರು ದಾಖಲಾಗಿತ್ತು. ಈ ತನಿಖೆಯಲ್ಲಿ ನೀಲೇಶನನ್ನು ಬಂಧಿಸಿ ವಿಚಾರಿಸಿದಾಗ ರೋಹನ್ ನಿವಾಸ ಮಾತ್ರವಲ್ಲದೇ ಮಚ್ಛೆಯಲ್ಲಿ ಲಕ್ಷ್ಮೀ ದೇವಲಾಪುರ ಮನೆ ಹಾಗೂ ಗಣೇಶ ಆಭರಣ ಅಂಗಡಿಯಲ್ಲೂ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ.

ಅಕ್ಕಸಾಲಿಗ ಬಂಧನ: ಚಿನ್ನದ ಕೆಲಸ ಮಾಡಲು ಕೊಟ್ಟಿದ್ದ ಗಟ್ಟಿ ಬಂಗಾರ ಸಮೇತ ನಾಪತ್ತೆಯಾಗಿದ್ದ ಆಂಧ್ರದ ವಿಜಯವಾಡ ಮೂಲದ ಕೃಷ್ಣ ಮೋಹನ ಮೈತಿ (36) ಬಂಧಿಸಿರುವ ಶಹಾಪುರ ಪೊಲೀಸರು, ಒಟ್ಟು 15,73,370ರೂ. ಮೌಲ್ಯದ 103.97 ಗ್ರಾಂ. ಗಟ್ಟಿ ಚಿನ್ನ ಹಾಗೂ ಚಿನ್ನದ ಸರ ವಶಪಡಿಸಿಕೊಂಡಿದ್ದಾರೆ.

ಶಹಾಪುರ ನಾರ್ವೇಕರ ಗಲ್ಲಿಯಲ್ಲಿ ಅಕ್ಕಸಾಲಿಗನ ಮನೆಯಲ್ಲಿ ಚಿನ್ನಾಭರಣ ತಯಾರಿ ಕೆಲಸಕ್ಕಿದ್ದ ಕೃಷ್ಣಾಗೆ ಮಾಲೀಕ ಆಭರಣ ತಯಾರಿಗೆ ಗಟ್ಟಿ ಚಿನ್ನ ಹಾಗೂ ರಿಪೇರಿಗೆ ಚಿನ್ನದ ಹಾರ ನೀಡಿದ್ದನು. ಆದರೆ, ಈತ ಮಾಲೀಕನಿಗೆ ಹೇಳದೆ ಚಿನ್ನ ಸಮೇತ ಪರಾರಿಯಾಗಿರುವುದಾಗಿ ದೂರು ದಾಖಲಾಗಿತ್ತು.

ಮಾದಕ ವ್ಯಸನಿಗಳ ವಿರುದ್ಧ ಕೇಸ್

ಬೆಳಗಾವಿ: ಸಾರ್ವಜನಿಕ ಸ್ಥಳದಲ್ಲಿ ಮಾದಕ ಪದಾರ್ಥ ಸೇವಿಸಿ ಅಸಹಜವಾಗಿ ವರ್ತಿಸುತ್ತಿದ್ದ ವೀರಭದ್ರ ನಗರದ ತಬ್ರೇಜ್ ಮುಲ್ಲಾ (23), ಅಶೋಕ ನಗರದ ಮುಜಾಹಿದ್ ತಾಳಿಕೋಟಿ (31), ಮಹಾಂತೇಶ ನಗರದ ಯಶ್ ಸುಧಾಕರ (28) ವಿರುದ್ಧ ಮಾಳಮಾರುತಿ ಠಾಣೆ ಹಾಗೂ ಮಹಾದ್ವಾರ ರಸ್ತೆಯ ವೈಭವ ಕುರಣೆ (23) ವಿರುದ್ಧ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗಾವಿ ನಗರ ಬಿಜೆಪಿ ಘಟಕದಿಂದ ಶುಕ್ರವಾರ ವಿಶ್ವ ಪರಿಸರ ದಿನದ ಪ್ರಯುಕ್ತ ಕಣಬರ್ಗಿಯಲ್ಲಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಮುಖಂಡ ಮುರುಘೇಂದ್ರಗೌಡ ಪಾಟೀಲ, ಮಾಜಿ ಶಾಸಕ ಅನಿಲ ಬೆನಕೆ, ಗೀತಾ ಸುತಾರ, ವಿಜಯಾ ಹಿರೇಮಠ, ವಿಜಯ ಕೊಡಗನೂರ, ಕಲ್ಲಪ್ಪ ಶಾಪೂರಕರ, ರಾಜಶೇಖರ ಡೋಣಿ ಇತರರಿದ್ದರು.

ತಂಬಾಕು ವ್ಯಸನಮುಕ್ತಿ ಜಾಗೃತಿ ಅಗತ್ಯ

ಬೆಳಗಾವಿ 4ನೇ ಸಾರಿಗೆ ಘಟಕದಲ್ಲಿ ಡಾ.ರವಿ ಪಾಟೀಲ ಆಯುರ್ವೇದ ಕಾಲೇಜ್ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಕಿರಣ ಖೋತ, ಡಾ.ಸಚಿನ ಪಟ್ಟಣಶೆಟ್ಟಿ, ಡಾ.ಶ್ರದ್ಧಾ ಮೇದಾರ, ಡಾ.ರೇಖಾ ಪಾಟೀಲ ಇತರರಿದ್ದರು.

ಬೆಳಗಾವಿ: ತಂಬಾಕು ವಿರೋಧಿ ದಿನದ ಅಂಗವಾಗಿ ಹೊನಗಾದ ಡಾ.ರವಿ ಪಾಟೀಲ ಆಯುರ್ವೇದ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಈಚೆಗೆ ರಾಮತೀರ್ಥ ನಗರದ 4ನೇ ಬಸ್ ಡಿಪೋದಲ್ಲಿ ತಂಬಾಕು ಮುಕ್ತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಡೀನ್ ಡಾ.ಕಿರಣ ಖೋತ ಹಾಗೂ ಪ್ರಾಂಶುಪಾಲ ಡಾ.ಸಚಿನ ಪಟ್ಟಣಶೆಟ್ಟಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಸಹ ಪ್ರಾಧ್ಯಾಪಕಿ ಡಾ.ಶ್ರದ್ಧಾ ಮೇದಾರ, ತಂಬಾಕು ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಮಾತನಾಡಿದರು.

ಸಹಾಯಕ ಪ್ರಾಧ್ಯಾಪಕಿ ಡಾ.ರೇಖಾ ಪಾಟೀಲ ತಂಬಾಕು ವ್ಯಸನದಿಂದ ಮುಕ್ತಿ ಪಡೆಯಲು ಇರುವ ಚಿಕಿತ್ಸಾ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು. ಕಾಲೇಜಿನ ದ್ವಿತೀಯ ವರ್ಷದ ಬಿಎಎಂಎಸ್ ವಶಿಷ್ಠ ಬ್ಯಾಚ್ ವಿದ್ಯಾರ್ಥಿಗಳು ಜಾಗೃತಿ ನಾಟಕ ಪ್ರದರ್ಶಿಸಿದರು.

ಭೂಮಿ ತಾಯಿ ಸಂರಕ್ಷಿಸುವ ಪ್ರತಿಜ್ಞೆ

ಬೆಳಗಾವಿ: ಕೆಎಲ್ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶುಕ್ರವಾರ ಪರಿಸರ ಜಾಗೃತಿಯೊಂದಿಗೆ ಹಸಿರು ದಿನ ಆಚರಿಸಲಾಯಿತು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹಸಿರು ಬಣ್ಣದ ಉಡುಪುಗಳನ್ನು ಧರಿಸಿ ಶಾಲೆಗೆ ಆಗಮಿಸಿದ್ದರು. ಶಾಲಾ ಆವರಣದಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಸಂದೇಶಗಳು ಪ್ರತಿಧ್ವನಿಸಿದರು. ವಿದ್ಯಾರ್ಥಿಗಳು ಭೂಮಿ ತಾಯಿ ರಕ್ಷಿಸುವ ಪ್ರತಿಜ್ಞೆ ಮಾಡಿದರು. ಬಳಿಕ ಸಾರ್ವಜನಿಕರಲ್ಲೂ ಜಾಗೃತಿ ಮೂಡಿಸಲು ಜಾಥಾ ಆಯೋಜಿಸಲಾಗಿತ್ತು.

ಬೆಳಗಾವಿ ಕೆಎಲ್ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳು ಸಸಿಗೆ ನೀರೆರೆದರು.

ಪ್ರಕೃತಿ ಗೀತೆಗಳು, ಪರಿಸರ ಸಂರಕ್ಷಣೆ ಕುರಿತ ಭಾಷಣ, ವೃಕ್ಷಾರೋಪಣ ಮತ್ತು ಪರಿಸರ ಸಂರಕ್ಷಣೆ ಉತ್ತೇಜಿಸುವ ಜಾಗೃತಿ ರ್‍ಯಾಲಿಗಳು ಪರಿಸರ ಸಮತೋಲನ ಹಾಗೂ ಸುಸ್ಥಿರ ಜೀವನ ಕುರಿತು ಜಾಗೃತಿ ಮೂಡಿಸಲಾಯಿತು. ಪ್ರಾಚಾರ್ಯೆ ಲಕ್ಷ್ಮೀ ದೇಶಪಾಂಡೆ ಮತ್ತು ಸಿಬ್ಬಂದಿ ಇದ್ದರು.

ರಡ್ಡಿ ಸಮುದಾಯ ಕಡೆಗಣಿಸಿದರೆ ಹೋರಾಟ

ಬೆಳಗಾವಿ ಸದಾಶಿವ ನಗರದ ರಡ್ಡಿ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಬಸವರಾಜ ಬಾವಲತ್ತಿ, ರಾಮಣ್ಣ ಮುಳ್ಳೂರ ಮಾತನಾಡಿದರು. ಕಾಂತು ಜಾಲಿಬೇರಿ, ಪರಮೇಶ್ವರ ಮುಳ್ಳೂರ ಇತರರಿದ್ದರು.

ಬೆಳಗಾವಿ: ರಾಜ್ಯ ಕಾಂಗ್ರೆಸ್ ಸರ್ಕಾರದ ನೂತನ ಸಚಿವ ಸಂಪುಟದಲ್ಲಿ ರಡ್ಡಿ ಸಮುದಾಯದ ಶಾಸಕರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು. ಇಲ್ಲವಾದರೆ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಲಾಗುವುದು ಎಂದು ಬೆಳಗಾವಿ ರಡ್ಡಿ ಸಂಘದ ಮಾಜಿ ಉಪಾಧ್ಯಕ್ಷ ಬಸವರಾಜ ಬಾವಲತ್ತಿ ಎಚ್ಚರಿಕೆ ನೀಡಿದರು.

ಸದಾಶಿವನಗರದ ರಡ್ಡಿ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುಭವಿ ಹಾಗೂ ಜನಪರ ನಾಯಕರನ್ನು ಕಡೆಗಣಿಸಿರುವುದು ಬೇಸರದ ಸಂಗತಿ. ಸಚಿವ ಸಂಪುಟದಿಂದ ಎಚ್.ಕೆ.ಪಾಟೀಲ ಅವರನ್ನು ಕೈಬಿಟ್ಟಿರುವುದು ಮತ್ತು ರಾಮಲಿಂಗಾ ರೆಡ್ಡಿ ಅವರಿಗೆ ಸೂಕ್ತ ಹುದ್ದೆ ನೀಡದಿರುವುದು ರಡ್ಡಿ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ. ಪಕ್ಷದಲ್ಲಿ ನಿಷ್ಠಾವಂತರಿಗೆ ಗೌರವ ಇಲ್ಲದಂತಾಗಿದೆ ಎಂಬ ಭಾವನೆ ಸಮುದಾಯದಲ್ಲಿ ಮೂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಡ್ಡಿ ಸಂಘದ ಅಧ್ಯಕ್ಷ ರಾಮಣ್ಣ ಮುಳ್ಳೂರ ಮಾತನಾಡಿ, ರಾಜ್ಯದಲ್ಲಿ ಸುಮಾರು 80 ಲಕ್ಷ ಜನಸಂಖ್ಯೆ ಹೊಂದಿರುವ ರಡ್ಡಿ ಸಮುದಾಯಕ್ಕೆ ಕನಿಷ್ಠ ನಾಲ್ವರು ಸಚಿವ ಸ್ಥಾನಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರದಲ್ಲಿ ರಡ್ಡಿ ಸಮುದಾಯದ ಶಾಸಕರಿಗೆ ಪದೇಪದೆ ಅನ್ಯಾಯ ಆಗುತ್ತಿರುವ ಕುರಿತು ಕಾಂಗ್ರೆಸ್ ಹೈಕಮಾಂಡ್ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ ಗಾಂಧಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಉಪಾಧ್ಯಕ್ಷ ಕಾಂತು ಜಾಲಿಬೇರಿ, ಪರಮೇಶ್ವರ ಮುಳ್ಳೂರ, ಪ್ರಕಾಶ ಕಕರಡ್ಡಿ, ಮಂಜುನಾಥ ಪಾಟೀಲ, ಬಸವರಾಜ ಗಣಿ ಇತರರಿದ್ದರು.

ಶ್ರೀ ಮಹಾಂತೇಶ ಕವಟಗಿಮಠ
ಸೌಹಾರ್ದ ಸಹಕಾರಿ ಸಂಘ ನಿಯಮಿತ, ಬೆಳಗಾವಿ
ಪ್ರಧಾನ ಕಚೇರಿ: ಗಿರ್ನಾರ ಫ್ರೆಡ್, ಮೊದಲನೇ ಮಹಡಿ, ಶಿವಬಸವನಗರ, ಬೆಳಗಾವಿ-10

ಬೇಕಾಗಿದ್ದಾರೆ

ನಮ್ಮ ಸಹಕಾರಿಯ ಚಿಕ್ಕೋಡಿ ಶಾಖೆಯಲ್ಲಿ ಕೆಲಸ ಮಾಡಲು ನುರಿತ ಹಾಗೂ ಅನುಭವವುಳ್ಳ ಈ ಕೆಳಗಿನ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗುವುದು. (ಸ್ಥಳಿಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು)

ಹುದ್ದೆಗಳು	ವಿದ್ಯಾರ್ಹತೆ	ಅನುಭವ	ವಯಸ್ಸು	ಹುದ್ದೆ
ಪಿಗ್ಮಿ ಸಂಗ್ರಾಹಕರು	PUC	1 ವರ್ಷ	20-40	1
ಸಿಪಾಯಿ	SSLC	1 ವರ್ಷ	20-35	1
ಸಾಲ ವಸೂಲಾತಿ	PUC	1 ವರ್ಷ	20-40	1

* ಸಹಕಾರಿ ಸಂಘಗಳಲ್ಲಿನ ಅನುಭವನ್ನು ಪರಿಗಣಿಸಲಾಗುವುದು.
* ಕಂಪ್ಯೂಟರ್‌ಜ್ಞಾನ ಹೊಂದಿರಬೇಕು.
* ಈ ಮೇಲಿನ ಹುದ್ದೆಗಳಿಗೆ ಆಸಕ್ತ ಅಭ್ಯರ್ಥಿಗಳು ಕೆಳಗೆ ನೀಡಿದ ಈ ಮೇಲ್ ಐಡಿಗೆ ತಮ್ಮ ಅರ್ಜಿಗಳನ್ನು ಕಳುಹಿಸಬೇಕು.

ಸಂದರ್ಶನ ಸ್ಥಳ : ಚಿಕ್ಕೋಡಿ ಶಾಖೆ. ಬುಧವಾರ ದಿನಾಂಕ: 10-06-2026
ಸಮಯ: ಮುಂಜಾನೆ: 11.00
ಸ್ಥಳ : ಕಿವುಡ ಶಾಲೆ ಹತ್ತಿರ, ಶ್ರೀ ಮಹಾಂತೇಶ ಕವಟಗಿಮಠ ಸೊಸೈಟಿ, ಚಿಕ್ಕೋಡಿ
9008916647 / 9880881549
Email : kavatagimathmahantesh@gmail.com

ಡಾ. ಶಿವಶಂಕರ ಮರಜಕ್ಕೆ
(ಮೆದುಳು ಮತ್ತು ಬೆನ್ನುಮೂಳೆಯ ತಜ್ಞರು)
ರವಿವಾರ 07.06.2026
10AM to 4PM
8690121008
ರೋಗಿಗಳ ಸಮಾಲೋಚನೆಗಾಗಿ ಈಗ ಗಡಹಿಂಗ್ಲಜಲ್ಲಿ ಲಭ್ಯವಿರುತ್ತಾರೆ.
ನೈತಿಕ, ಸುಧಾರಿತ ನರ ಮತ್ತು ಬೆನ್ನುಮೂಳೆಯ ಆರೈಕೆಯನ್ನು ನೀಡುವ ವಿಶ್ವಪ್ರಸಿದ್ಧ ಮೆದುಳು ಮತ್ತು ಬೆನ್ನುಮೂಳೆಯ ತಜ್ಞರು
ಶಿವಪ್ರತಿಮಾ, ಸ್ವಾಮಿ ಕಾಲೋನಿ, ಗಾಂಧಿನಗರ, ಗಡಹಿಂಗ್ಲಜ, ಜಿಲ್ಲೆ ಕೊಲ್ಹಾಪುರ
Scan for location

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ

ಕನೀನಿನಿ/ಘಟಕಾನಿ/ವಿ-5/ಡಿಬಿ/ಟೆಂಡರ್/ಅವಧಿ ವಿ.ಕಾ/2026-27/323 ದಿನಾಂಕ:-04/06/2026

ಮರು ಟೆಂಡರ್ ಪ್ರಕಟಣೆ
(ಕೆ.ಪಿ.ಪಿ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ)

ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ ವಿಭಾಗ ಅಡಿಯಲ್ಲಿ ಅಲ್ಪಾವಧಿ ಶೇಕಡಾವಾರು ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ (ದ್ವಿಲಕೋಟೆಯಲ್ಲಿ) ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ ಎರಡು (2) ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದ್ದು ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು 131.20 ರಿಂದ 141.50 ಲಕ್ಷಗಳು ಇದ್ದು ಮುಂಗಡ ಠೇವಣಿ ಮೊತ್ತವು 2,04,000.00 ರಿಂದ 2,23,000.00 ರೂಗಳು ಇರುತ್ತದೆ. ಟೆಂಡರನ್ನು ಸ್ವೀಕರಿಸುವ ದಿನಾಂಕ:-05-06-2026 ರಿಂದ 15-06-2026 ರ ಸಂಜೆ 05.00 ಘಂಟೆಯವರೆಗೆ ಮತ್ತು ಟೆಂಡರನ್ನು ತೆರೆಯುವ ದಿನಾಂಕ:-16-06-2026 ರ ಸಂಜೆ 05.15 ಘಂಟೆ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ:- www.kppp.karnataka.gov.in ರಲ್ಲಿ ದಿನಾಂಕ:-05-06-2026 ರ ನಂತರ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ.

DIPR/BGM/RO-NO-375/KSMCA/2026-27

ಮೇಖಾಲಿ ಪವರ್ ಟ್ರಾನ್ಸ್‌ಮಿಷನ್ ಲಿಮಿಟೆಡ್
ಪ್ಲಾಟ್ ನಂ. 54, ಮೆಟ್ರೋ ವ್ಯೂ ರೆಸಿಡೆನ್ಸಿ, ದ್ವಾರಕಾ ಸೆಕ್ಟರ್-11 ಮೆಟ್ರೋ ನಿಲ್ದಾಣದ ಸಮೀಪ, ದ್ವಾರಕಾ ಸೆಕ್ಟರ್-11, ನವದೆಹಲಿ - 110075

ಸೂಚನೆ
(ವಿದ್ಯುತ್ ಕಾಯ್ದೆ, 2003ರ ಕಲಂ 15ರ ಉಪಕಲಂ (2)ರ ಅಡಿಯಲ್ಲಿ)

1. **ಮೇಖಾಲಿ ಪವರ್ ಟ್ರಾನ್ಸ್‌ಮಿಷನ್ ಲಿಮಿಟೆಡ್**, ಇದು ನೋಂದಾಯಿತ ಕಚೇರಿಯನ್ನು **ಪ್ಲಾಟ್ ನಂ. 54, ಮೆಟ್ರೋ ವ್ಯೂ ರೆಸಿಡೆನ್ಸಿ, ದ್ವಾರಕಾ ಸೆಕ್ಟರ್-11 ಮೆಟ್ರೋ ನಿಲ್ದಾಣದ ಸಮೀಪ, ದ್ವಾರಕಾ ಸೆಕ್ಟರ್-11, ನವದೆಹಲಿ - 110075** ನಲ್ಲಿ ಹೊಂದಿದ್ದು, ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ನೋಂದಾಯಿತ ಕಂಪನಿಯಾಗಿದೆ. ಈ ಕಂಪನಿಯು ವಿದ್ಯುತ್ ಕಾಯ್ದೆ, 2003ರ ಕಲಂ 15ರ ಉಪಕಲಂ (1)ರ ಅಡಿಯಲ್ಲಿ, ಅದರ ವ್ಯಾಪ್ತಿಯಲ್ಲಿರುವ ಕೆಳಕಂಡ ಪ್ರಸರಣ ಮಾರ್ಗಗಳು, ಉಪಕೇಂದ್ರಗಳು ಹಾಗೂ ಇತರೆ ಆಸ್ತಿಗಳಿಗೆ ಸಂಬಂಧಿಸಿದಂತೆ, ಪ್ರಸರಣ ಪರವಾನಗಿ ಮಂಜೂರು ಮಾಡುವಂತೆ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ಬೆಂಗಳೂರು ಇವರ ಮುಂದೆ ಅರ್ಜಿ ಸಲ್ಲಿಸಿದೆ.

ಕ್ರ. ಸಂಖ್ಯೆ.	ಲೈನ್/ ಉಪ-ಕೇಂದ್ರದ ಹೆಸರು (ಸ್ಥಳ)	ಲೈನ್ ಉದ್ದ/ ಸಾಮರ್ಥ್ಯ	ಕೋಟೆಡ್ ಪ್ರಸರಣ ಶುಲ್ಕಗಳು	ಶೆಡ್ಯೂಲ್ ಸಿಓಡಿ	ಟಿಪ್ಪಣಿಗಳು
1.	400/220/33kv ಮೇಖಾಲಿ ಸಬ್‌ಸ್ಟೇಷನ್. ಗ್ರಾಮ ಮೇಖಾಲಿ, ತಾ. ರಾಯ್‌ಬಾಗ್. ಜಿಲ್ಲೆ. ಬೆಳಗಾವಿ	2 x 500 MVA	ವಾರ್ಷಿಕವಾಗಿ ರೂ. 3313.52 ಮಿಲಿಯನ್	29-05-2028 (SPV ವರ್ಗಾವಣೆ ದಿನಾಂಕದಿಂದ ಅಂದರೆ 30.05.2026 ರಿಂದ 24 ತಿಂಗಳುಗಳು)	400kv ಬೇ ಎಕ್ಸ್‌ಟೆನ್ಷನ್‌ಗಳು - ಧೋನಿ ಸಬ್‌ಸ್ಟೇಷನ್‌ನಲ್ಲಿ 2 ಲೈನ್ ಬೇ ಮತ್ತು ಯಲ್ಲಾರ್ ಸಬ್‌ಸ್ಟೇಷನ್‌ನಲ್ಲಿ 2 ಲೈನ್ ಬೇ. 220kv ಬೇ ಎಕ್ಸ್‌ಟೆನ್ಷನ್‌ಗಳು - ಕುಡಚಿ ಸಬ್‌ಸ್ಟೇಷನ್‌ನಲ್ಲಿ 2 ಲೈನ್ ಬೇ, ಮಹಾಲಿಂಗಪುರ ಸಬ್‌ಸ್ಟೇಷನ್‌ನಲ್ಲಿ 2 ಲೈನ್ ಬೇ ಮತ್ತು ಹತ್ತರ್ಗಿ ಸಬ್‌ಸ್ಟೇಷನ್‌ನಲ್ಲಿ 2 ಲೈನ್ ಬೇ
2.	ಧೋನಿ-ಮೇಖಾಲಿ	172.89 ಕಿಮೀ			ಡಬಲ್ ಸರ್ಕ್ಯೂಟ್
3.	ಯಲ್ಲಾರ್-ಮೇಖಾಲಿ	149.41 ಕಿಮೀ			ಡಬಲ್ ಸರ್ಕ್ಯೂಟ್
4.	ಹತ್ತರ್ಗಿ-ಮೇಖಾಲಿ	45.51 ಕಿಮೀ			ಡಬಲ್ ಸರ್ಕ್ಯೂಟ್
5.	ಕುಡಚಿ-ಮೇಖಾಲಿ	31.71 ಕಿಮೀ			ಡಬಲ್ ಸರ್ಕ್ಯೂಟ್
6.	ಮಹಾಲಿಂಗಪುರ-ಮೇಖಾಲಿ	47.01 ಕಿಮೀ			ಡಬಲ್ ಸರ್ಕ್ಯೂಟ್
7.	ಚಿಕೋಡಿ-ಮುಗಲ್‌ಖೋಡ್ (ಲೂಪ್ ಇನ್)	3.93 ಕಿಮೀ			ಡಬಲ್ ಸರ್ಕ್ಯೂಟ್
8.	ಚಿಕೋಡಿ-ಮುಗಲ್‌ಖೋಡ್ (ಲೂಪ್ ಔಟ್)	4.50 ಕಿಮೀ			ಡಬಲ್ ಸರ್ಕ್ಯೂಟ್

2. ಆಯೋಗದ ಮುಂದೆ ಸಲ್ಲಿಸಲಾದ ಸಂಪೂರ್ಣ ಅರ್ಜಿ ಹಾಗೂ ಇತರೆ ದಾಖಲೆಗಳು https://mptl.dilipbuildcon.com/ ವೆಬ್‌ಸೈಟ್‌ನಲ್ಲಿ ಸಾರ್ವಜನಿಕ ವೀಕ್ಷಣೆಗೆ ಲಭ್ಯವಿವೆ. ಅಲ್ಲದೇ ಅರ್ಜಿಯನ್ನು **(1)ಶ್ರೀ ಸುಹಾಸ್ ಯಶವಂತ ಕುಲಕರ್ಣಿ (ಯೋಜನಾ ಮುಖ್ಯಸ್ಥರು +91 6232014750) ಮತ್ತು (2) ಶ್ರೀ ಸಂತೋಷ ಕುಮಾರ ಚಾಂಡೆಲ್ (ಪ್ರಧಾನ ವ್ಯವಸ್ಥಾಪಕರು- ಪವರ್ ಟ್ರಾನ್ಸ್‌ಮಿಷನ್, +91 6232019632) ಇವರಲ್ಲಿ ಮೇಖಾಲಿ ಪವರ್ ಟ್ರಾನ್ಸ್‌ಮಿಷನ್ ಲಿಮಿಟೆಡ್, C/0 ಮೆ॥ ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್, 1ನೇ ಮಹಡಿ, ಸಾಯಿ ಕಾಂಪ್ಲೆಕ್ಸ್, ಜಲಾಲಪುರ ರಸ್ತೆ ರಾಯಭಾಗ್, ಜಿಲ್ಲೆ-ಬೆಳಗಾವಿ, ಕರ್ನಾಟಕ-591317** ನಲ್ಲಿಯೂ ಅಥವಾ ಆಯೋಗವು ನಿಗದಿಪಡಿಸಿರುವ ವಿಧಾನಕ್ಕೆ ಅನುಗುಣವಾಗಿ ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗದ ಕಚೇರಿಯಲ್ಲಿಯೂ ಸಹ ಪರಿಶೀಲಿಸಬಹುದು.
3. ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳು ಇದ್ದಲ್ಲಿ, ಈ ಸೂಚನೆ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ, ಅವುಗಳನ್ನು ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, **ನಂ. 16ಸಿ-1, ಮಿಲ್ಲರ್ಸ್ ರಸ್ತೆ, ಕಾವೇರಪ್ಪ ಲೇಔಟ್, ವಸಂತ ನಗರ, ಬೆಂಗಳೂರು-560052** ಇವರಿಗೆ ಸಲ್ಲಿಸಬೇಕು ಮತ್ತು ಇಮೇಲ್ kerc-ka@nic.in ಮೂಲಕವೂ ಸಲ್ಲಿಸಬಹುದು. ಜೊತೆಗೆ ಆಕ್ಷೇಪಣೆ/ಸಲಹೆಗಳ ಪ್ರತಿಯನ್ನು ಅರ್ಜಿದಾರರಿಗೆ ಅಥವಾ ಅವರ ಅಧಿಕೃತ ಪ್ರತಿನಿಧಿಗೆ ಕಳುಹಿಸಬೇಕು

ಸ್ಥಳ: ಬೆಳಗಾವಿ
ದಿನಾಂಕ: 06/06/2026
ಅಧಿಕೃತ ಸಹಿದಾರರ ಹೆಸರು ಮತ್ತು ಹುದ್ದೆ

ವಿಜಯವಾಣಿ ವೀಕೆಂಡ್ ಕಾರ್ನರ್
ಸಂಪರ್ಕಿಸಿ :
8884432113, 8497891641,8147267694

ಬಂಗಾರದ ಆಭರಣಗಳ ಮೇಲೆ ಸುಲಭ ಸಾಲ..!
ಪ್ರತಿ ಗ್ರಾಂ ರೂ.10,000/- 1% ಬಡ್ಡಿ ದರದಲ್ಲಿ
ಕೇವಲ 3 ನಿಮಿಷಗಳಲ್ಲಿ
ಯಾವುದೇ ಬ್ಯಾಂಕ್‌ನಲ್ಲಿ ಅಡವಿಟ್ಟಿರುವ ನಿಮ್ಮ ಚಿನ್ನದ ಆಭರಣಗಳನ್ನು ನಾವು ಬಿಡಿಸಿ, ಇಂದಿನ ಮಾರುಕಟ್ಟೆ ದರದಲ್ಲಿ ಖರೀದಿ ಮಾಡುತ್ತೇವೆ.
*T & C Apply
ಅಣವೇಕರ ಗೋಲ್ಡ್
ಮಹಾದ್ವಾರ ರೋಡ್, ಬೆಳಗಾವಿ
ಮೋ: 8884388863, 9448796863

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಚೇರಿ, ಬೆಂಘತ್ಯಾನಿನಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052

ಸಂಖ್ಯೆ:ಉಪ್ರವ್ಯ-1/ಬೆಂಘತ್ಯಾನಿನಿ/ಪಿಎಂಸಿ/ಟೆಂಡ್/02/2026-27 ದಿನಾಂಕ:05.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು-1, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು ಇವರ ಪರವಾಗಿ ಅರ್ಹ ಟೆಂಡರುದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಯೋಜನಾ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರುದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (viz.https://kppp.karnataka.gov.in) ಮೂಲಕ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಸಲ್ಲಿಸುವುದು. ಟೆಂಡರುದಾರರು ಸ್ಟ್ಯಾಂಡರ್ಡ್ ಬಿಡ್ ದಾಖಲೆಗಳ ಪ್ರಕಾರ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಅನುಸರಿಸಲು ಸೂಚಿಸಲಾಗಿದೆ. ಇತರೆ ಮಾಹಿತಿಗಳನ್ನು ಬಿಡ್ಡಿಂಗ್ ದಸ್ತಾವೇಜುಗಳಲ್ಲಿ ನೋಡಿಕೊಳ್ಳಬಹುದು.

ಕ್ರ ಸಂ.	ಕಾಮಗಾರಿಯ ಹೆಸರು	ಯೋಜನೆಯ ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಅವಧಿ (ಮುಂಗಾರು ಒಳಗೊಂಡಂತೆ)
1	ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬೈಯಪ್ಪನಹಳ್ಳಿ ಸರ್ವೆ ಸಂ.80 ಮತ್ತು ಬಾಗಲೂರು ಸರ್ವೆ ಸಂ.271ರಲ್ಲಿ ಲ್ಯಾಂಡ್‌ಫಿಲ್ ಸೈಟ್‌ಗೆ ವೈಜ್ಞಾನಿಕ ಅಂತಿಮ ಕ್ಲೋಷರ್ ಮತ್ತು ಕಿಣ್ವಗಳ ಸಿಂಪಡಿಕೆ ಬಳಸಿಕೊಂಡು ಕೀಟಗಳ ಹಾವಳಿ ನಿಯಂತ್ರಣ ಹಾಗೂ ಅವಶ್ಯಕ ಮೂಲಭೂತಸೌಕರ್ಯಗಳನ್ನು ರಚಿಸುವುದರೊಂದಿಗೆ ಸುತ್ತಮುತ್ತಲ ಗ್ರಾಮಗಳನ್ನು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಪಿಎಂಸಿ ನಿಯೋಜನೆ.	68,44,633/-	1,36,893/-	11 ತಿಂಗಳು

ಟೆಂಡರ್ ವೇಳಾಪಟ್ಟಿ: 1) ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:**12.06.2026**ರಂದು **5:30 ಗಂಟೆಯವರೆಗೆ.** 2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ:**15.06.2026**ರಂದು ಮಧ್ಯಾಹ್ನ **3:00 ಗಂಟೆಗೆ** ಮೇಲ್ಕಂಡ ಕಚೇರಿಯಲ್ಲಿ. 3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:**24.06.2026** ರಂದು ಸಂಜೆ **4:00 ಗಂಟೆಯೊಳಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**25.06.2026**ರಂದು ಸಂಜೆ **4:30 ಗಂಟೆಯ** ನಂತರ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1,
ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

ಡಿಐಪಿಆರ್/ಸಿಪಿ/1014/ಸಿಸಿಎಲ್/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು - 560 009. ದೂ.ಸಂಖ್ಯೆ : 080-22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಡಿಪಿಆರ್-01/681/2026-27 ದಿನಾಂಕ: 05.06.2026

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಯೋಜನೆಗಳಿಗೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು/ಸಂಸ್ಥೆಗಳಿಂದ ದ್ವಿ-ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನಲ್ಲಿ ಪ್ರಸ್ತಾಪಿತ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶ ಹಂತ-8 ರ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚದ ರಚನೆಗಳು ಇತ್ಯಾದಿ ಸೇರಿದಂತೆ ವಿವರವಾದ ಯೋಜನಾ ವರದಿ (ಡಿಪಿಆರ್) ಅನ್ನು ಸಿದ್ಧಪಡಿಸುವುದಕ್ಕಾಗಿ ಸಲಹಾ ಸೇವೆಗಳನ್ನು ಒದಗಿಸುವುದು. (ವಿಸ್ತೀರ್ಣ 486ಎ-27½ಜಿ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08.07.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಪ್ರಧಾನ ಅಭಿಯಂತರರು, ಕೆಐಎಡಿಬಿ, ಬೆಂಗಳೂರು

DIPR/CP/1009/Zen/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು - 560 009. ದೂ.ಸಂಖ್ಯೆ : 080-22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-17/683/2026-27 ದಿನಾಂಕ: 05.06.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್‌ನ ಹಂತ-2 ರಲ್ಲಿ ರಸ್ತೆ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ. 2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, ಹಂತ-2 (ಹರಳೂರು-ಮುದ್ದೇನಹಳ್ಳಿ) ನಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22.06.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಪ್ರಧಾನ ಅಭಿಯಂತರರು, ಕೆಐಎಡಿಬಿ, ಬೆಂಗಳೂರು

DIPR/CP/1010/Zen/2026-27

ವಿಜಯವಾಣಿ CLASSIFIEDS
: ಸಂಪರ್ಕಿಸಿ :
0831-2950700
8884432338

ಬೇಕಾಗಿದ್ದಾರೆ
ಸೇಲ್ಸ್ ಮತ್ತು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ ಬೇಕಾಗಿದ್ದಾರೆ
ಕೆಲಸದ ಸ್ಥಳಗಳು:
ಸಂಕೇಶ್ವರ, ನಿಪ್ಪಾಣಿ, ಚಿಕ್ಕೋಡಿ, ಗೋಕಾಕ, ಯರಗಟ್ಟಿ, ರಾಮದುರ್ಗ, ಸವದತ್ತಿ, ಬೈಲಹೊಂಗಲ್, ರಾಮನಗರ ಹಾಗೂ ಲೋಂಡಾ.
ಶೈಕ್ಷಣಿಕ ಅರ್ಹತೆ: SSLC / PUC / ಪದವಿ
ಸಂಬಳ: ₹20,000 ರಿಂದ ₹35,000
ಆಸಕ್ತ ಅಭ್ಯರ್ಥಿಗಳು ಸಂಪರ್ಕಿಸಿ:
9071773391

ಪ್ರಿಯ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿರುವ ಮಾಹಿತಿ, ವಸ್ತುಲೋಪ -ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ನೀಡುವವರೊಂದಿಗೆ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
ಜಾಹೀರಾತು ವ್ಯವಸ್ಥಾಪಕರು

ರಾಜ್ಯದ ಪ್ರಮುಖ ಜಲಾಶಯಗಳ ಇಂದಿನ ನೀರಿನ ಮಟ್ಟ
ಒಳ ಹರಿವು-ಹೊರ ಹರಿವು ಕ್ಯೂಸೆಕ್‌ಗಳಲ್ಲಿ

ಜಲಾಶಯ	ಇಂದಿನಮಟ್ಟ	ಗರಿಷ್ಠ	ಒಳ-ಹೊರಹರಿವು
ತುಂಗಭದ್ರಾ	1588.66	1633 ಅಡಿ	95-311
ಆಲಮಟ್ಟಿ	508.43	519.60 ಮೀ.	00-2697
ಲಿಂಗನಮಕ್ಕಿ	1750.50	1819 ಅಡಿ	956-4929
ಭದ್ರಾ	137	186 ಅಡಿ	590-441
ತುಂಗಾ	586.90	588.24 ಮೀ.	405-90
ಘಟಪ್ರಭಾ	2096.15	2175 ಅಡಿ	00-116
ಮಲಪ್ರಭಾ	2048.74	2079.50 ಅಡಿ	00-194
ಕೆಆರ್‌ಎಸ್	81.36	124.80 ಅಡಿ	475-437
ಕಬಿನಿ	2251.39	2284 ಅಡಿ	500-600
ಹಾರಂಗಿ	2823.33	2859 ಅಡಿ	89-180
ಹೇಮಾವತಿ	2890.99	2922 ಅಡಿ	110-300

ಹವಾಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

ಜಿಲ್ಲೆ	ಕನಿಷ್ಠ	ಗರಿಷ್ಠ
ಮೈಸೂರು	23.0	28.0
ಶಿವಮೊಗ್ಗ	23.0	26.0
ಬಳ್ಳಾರಿ	23.0	29.0
ಬೆಳಗಾವಿ	19.0	28.0
ಹುಬ್ಬಳ್ಳಿ	22.0	29.8
ಕಲಬುರಗಿ	25.2	37.6
ವಿಜಯಪುರ	22.5	33.5
ಮಂಗಳೂರು	24.3	30.1
ಚಿತ್ರದುರ್ಗ	22.1	32.1
ಬೆಂಗಳೂರು	21.5	31.2